ನಂತರ ಮುಂದೆ ಹೋಗುತ್ತಿದ್ದೆ.

ಅಂತೂ ಪ್ರಯಾಸದ ನಡಿಗೆ ನಂತರ ನಮ್ಮ ಜಾಗೆ ಸಿಕ್ಕಿತು. ಸುತ್ತಲೂ ದಟ್ಟ ಕಾಡು, ಎತ್ತರದ ಮರಗಳು ಅದರಾಚೆಗೆ ಹರಿವ ಝರಿಗಳ ನಿನಾದ. ಸ್ವರ್ಗವೆಂದರೆ ಇದೇ ಎನ್ನುವಷ್ಟು ಸುಂದರ ಜಾಗ. ಪಕ್ಷಿಗಳಿಗಾಗಿ ಅನೇಕ ಹೂವಿನ ಹಣ್ಣಿನ ಗಿಡಗಳನ್ನು ನೆಟ್ಟಿದ್ದರು. 'ಇಲ್ಲಿಗೆ ಬೆಳಗಿನ ಹೊತ್ತು ಸನ್ ಬರ್ಡ್‌ಗಳು ಬರುತ್ತವೆ ಎಂದು' ಅರುಣಿಮಾ ನಗುತ್ತಾ ಬಂದು ಬಿಸಿ ಚಹಾ ಕೊಟ್ಟರು. ಥಂಡಿಯಾದಾಗ ಟೀ ಸಿಕ್ಕರೆ ಅದರಷ್ಟು ಸುಖ ಮತ್ತೊಂದಿಲ್ಲ. ಅಡುಗೆ ಮತ್ತು ವಾಸಕ್ಕೆಂದು ಸಣ್ಣ ಹಲಗೆಯ ಮನೆ ರಚಿಸಿಕೊಂಡಿದ್ದರು. ಪುಟ್ಟ ಮನೆಯ ಬಾಗಿಲಲ್ಲೇ ಹಿಂದಿನ ಗುಡ್ಡದಿಂದ ಧುಡುಧುಡನೆ ಓಡಿ ಬಂದು ಬೀಳುವ ನೀರ ಸೆಲೆ. ರಾತ್ರಿ ಹಗಲೂ ಒಂದೇ ಸಮನೆ ಆ ನೀರು ಬೀಳುತ್ತಿತ್ತು. ಆ ನೀರು ಬೊಗಸೆಯಲ್ಲಿ ಹಿಡಿದು ಕುಡಿದರೆ ಅಮೃತ ಸಮಾನ.

ನಾವು ನೋಡಲು ಬಂದಿದ್ದ ಅಪರೂಪದ ಸ್ಕೇರ್ಲೆಟ್ ಫೇಸ್ಡ್ ಲಿಯೋ ಚಿಚಾಲ ಎಂಬ ಕೆಂಬಣ್ಣದ ಹಕ್ಕಿ ಇದೇ ಚಾಂಗ್ ಥಾಂಗ್ ಪರ್ವತದಲ್ಲಿತ್ತು. ಇಲ್ಲಿ ಅರುಣಿಮಾ ನಮ್ಮಂತೆ ಆಸೆಪಟ್ಟು ಬರುವ ಫೋಟೊಗ್ರಾಫರ್ ಗಳಿಗೆ ಊಟ, ತಿಂಡಿ, ವಸತಿ ಕೊಟ್ಟು ಹಕ್ಕಿಗಳನ್ನು ತೋರಿಸುವ ಕಾಯಕ ಮಾಡುತ್ತಿದ್ದಾರೆ. ಉಳಿದ ಸಮಯದಲ್ಲಿ ಟೀ ಎಸ್ಟೇಟುಗಳಿಗೆ ಎಲೆ ಕೀಳಲು ಹೋಗುವುದು, ರಸ್ತೆ ಕೆಲಸ, ಎಲ್ಲಾ ಬಗೆಯ ಕೂಲಿ ಕೆಲಸಗಳನ್ನು ನಿರ್ವಹಿಸಬಲ್ಲವರಾಗಿದ್ದರು. ಹೆಚ್ಚು ಓದು ಬರಹ ಇಲ್ಲದೆ ಹೋದರೂ ತಮ್ಮ ಪರಿಸರದ ಹಕ್ಕಿಗಳ ಹೆಸರು, ಮತ್ತು ಅವುಗಳ ಜೀವನ ವಿಧಾನಗಳನ್ನು ವಿವರಿಸುವ ಜ್ಞಾನ ಗಳಿಸಿದ್ದರು. ಹಕ್ಕಿಗಳ ಆಂಗ್ಲ ಹೆಸರುಗಳನ್ನು ಉರುಹಚ್ಚಿಟ್ಟುಕೊಂಡು ಬಾರಿಸುತ್ತಿದ್ದರು. ಹಸಿದ ಹೊಟ್ಟೆ ಮತ್ತು ಅನಿವಾರ್ಯ ಪರಿಸ್ಥಿತಿಗಳು ಎಲ್ಲವನ್ನೂ ಕಲಿಸುತ್ತವೆ.

ಇಲ್ಲಿನ ತಂಪು ಪರಿಸರದಲ್ಲಿ ಕುತೂಹಲದಿಂದ ಓಡಾಡಿದೆವು. ನ್ಯಾಚುರಲಿಸ್ಟ್ ಬಂದು ಹಕ್ಕಿಗಳು ಬಂದು ಹೋಗುವ ತಾವನ್ನು ತೋರಿಸಿದ. ಅವರ ಮನೆಯ ಹಿಂದೆಯೇ ಕೂತು ಆರಾಮಾಗಿ ಅವುಗಳ ಪಟ ತೆಗೆಯಬಹುದಿತ್ತು. ಪಕ್ಷಿಗಳಿಗೆ ಆಕರ್ಷಣೆಯಾಗಲು ನೀರು ಗಿಡಗಳ ಮೇಲಿಂದ ತೊಟ್ಟಿಕ್ಕುವಂತೆ ವ್ಯವಸ್ಥೆ ಮಾಡಿದ್ದರು. ಅದರ ಕೆಳಗೆ ಒಂದೆರಡು ಇಂಚು ನೀರು ನಿಲ್ಲಬಲ್ಲ ಸಣ್ಣ ಹೊಂಡವಿತ್ತು. ನೀರ ಮೇಲೆ ಅಲ್ಲಲ್ಲಿ ಕಲ್ಲು ಇಟ್ಟಿದ್ದರು. ಹಕ್ಕಿಗಳು ಮೊದಲು ಬಂದು ಕೂರಲು ಪಾಚಿಗಟ್ಟಿದ ಒಣಮರದ ಕೊಂಬೆಗಳ ಕಟ್ಟಿದ್ದರು. ಸಣ್ಣ ಪಕ್ಷಿಗಳು ಆಳ ನೀರೆಂದರೆ ಸ್ನಾನ ಮಾಡಲು ಹೆದರುತ್ತವೆ. ಅವುಗಳಿಗೆ ದೇಹ ಮುಳುಗದ, ತಳ ಸ್ಪಷ್ಟವಾಗಿ ಕಾಣುವ ಸುರಕ್ಷಿತ ಜಾಗವೇ ಆಗಬೇಕು. ನೀರಿನ ನಡುವೆ ಕಲ್ಲುಗಳಿದ್ದರೆ ಜಳಕ ಮುಗಿಸಿ ಅದರ ಮೇಲೆ ಕೂರಲು ಅನುಕೂಲ. ಸುತ್ತಮುತ್ತ ಒಮ್ಮೆ ತಿರುಗಿ ನೋಡಿ ನೀರಲ್ಲಿ ಇಳಿಯುತ್ತವೆ. ಕತ್ತು ಮುಳುಗಿಸಿ ಪಟಪಟನೆ ರೆಕ್ಕೆ ಬಡಿಯುತ್ತವೆ. ಹೆಚ್ಚು ಹೊತ್ತು ಈ ನೀರಾಟ ಆಡಲು ಅವಕ್ಕೆ ಜೀವ ಭಯ. ಶತ್ರುಗಳು ದಾಳಿ ಮಾಡಿ ಕೊಂದಾರೆಂಬ ಅಂಜಿಕೆ. ಹೀಗಾಗಿ ಹತ್ತಿಪ್ಪತ್ತು ಸೆಕೆಂಡಿನಲ್ಲಿ ಮೂರ್ನಾಕು ಸಲ ಒದ್ದಾಡಿ ಪುರ್ರೆಂದು ಹಾರಿ ಹೋಗುತ್ತವೆ. ಮುಂದೆ ಒಂದು ಕೊಂಬೆಯ ಮೇಲೆ ಹೋಗಿ ಕೂತು ರೆಕ್ಕೆಗಳನ್ನು ಕೊಕ್ಕಿನಲ್ಲಿ ಸಾಫು ಮಾಡಿಕೊಳ್ಳುತ್ತವೆ. ಮತ್ತೆ ಐದಾರು ನಿಮಿಷಕ್ಕೆ ಹಾರಿ ಬಂದು ಯಥಾಪ್ರಕಾರ ಮಜ್ಜನ ಮುಂದುವರೆಸುವುದು ಅವುಗಳ ಸ್ವಭಾವ. ಈ ಬಗೆಯ ನೀರಿನಾಟವೆಂದರೆ ಅವುಗಳಿಗೆ ಪಂಚಪ್ರಾಣ. ಹಕ್ಕಿಗಳು ಹೆಚ್ಚು ಸಂತೋಷದಿಂದ ಮತ್ತು ಉತ್ಸಾಹದಿಂದ ಈ ಜಲಲೀಲೆಯನ್ನು ನಡೆಸುತ್ತವೆ. ಆಗ ಪರಸ್ಪರ ಜಗಳ, ಕಿತ್ತಾಟ, ಕೆಲ ಹಕ್ಕಿಗಳ ರೌಡಿಸಂ ಕೂಡ ನಡೆಯುತ್ತದೆ.

ಮಧ್ಯಾಹ್ನ ಊಟ ಸಿದ್ಧವಾಗಿದೆ ಬನ್ನಿ ಎಂದು ಅರುಣಿಮಾ ಕರೆದರು. ಅಷ್ಟರಲ್ಲಿ ನಮ್ಮ ಡಾ.ರಾಘವೇಂದ್ರ ಸಣ್ಣದೊಂದು ಬಾಂಬ್ ಸಿಡಿಸಿದರು. ವಿಷಯವೇನೆಂದರೆ ಲಗೇಜಿನ ಸಣ್ಣ ಕಪ್ಪು ಬ್ಯಾಗನ್ನು ನೈತಾನ್ ಹಳ್ಳಿಯ ರಸ್ತೆ ಬದಿಯ ಬಸ್ ಸ್ಟಾಂಡಿನಲ್ಲಿ ಮರೆತು ಬಿಟ್ಟು ಬಂದಿದ್ದರು. ಅದರಲ್ಲಿದ್ದ ಕೆಲ ವಸ್ತುಗಳು ಕ್ಯಾಮೆರಾ ಬಳಸುವಾಗ ಅಗತ್ಯವಾಗಿ ಬೇಕಾಗಿದ್ದ ಪರಿಕರಗಳಾಗಿದ್ದವು.

ಈ ವಿಷಯ ಅರುಣಿಮಾಗೆ ಹೇಳಿದರೆ ಬೆಟ್ಟವಿಳಿದು ಹೋಗಿ ಬರುವುದು ಕಷ್ಟವಾಗಬಹುದು. ಹೇಳದಿದ್ದರೆ ಅಮೂಲ್ಯ ವಸ್ತುಗಳ ಬ್ಯಾಗಿಗೆ ಎಳ್ಳುನೀರು ಬಿಟ್ಟಂತೆ. ಊಟವಾದ ನಂತರ ಪ್ರಸ್ತಾಪಿಸಿ ನೋಡೋಣವೆಂದು ತಟ್ಟೆಗೆ ಕೈ ಹಚ್ಚಿದೆವು. ಬಿಸಿ ರೊಟ್ಟಿಗೆ ಆಕೆ ತನ್ನ ಅಂಗಳದಲ್ಲೇ ಬೆಳೆದ ಕಾಡಿನ ಥರಾವರಿ ಸೊಪ್ಪುಗಳ ಬಳಸಿ ಪಲ್ಯೆ ಮಾಡಿದ್ದಳು. ಅದು ಘಮಘಮ